**ಭಾರತೀಯ ರಿಸರ್ವ್ ಬ್ಯಾಂಕಿನ ವಿದೇಶೀ ವಿನಿಮಯ ನಿಯಂತ್ರಣ ಇಲಾಖೆ**
**ಕೇಂದ್ರ ಕಚೇರಿ, ಮುಂಬೈ-400001.**

ಎ.ಪಿ. (ಡಿಐಆರ್ ಶ್ರೇಣಿ) ಸುತ್ತೋಲೆ ಸಂಖ್ಯೆ-11 ನವೆಂಬರ್ 13, 2001
ಎ.ಪಿ. (ಎಫ್.ಎಲ್. ಶ್ರೇಣಿ) ಸುತ್ತೋಲೆ ಸಂಖ್ಯೆ-1

ವಿದೇಶೀ ವಿನಿಮಯ ವ್ಯವಹಾರದಲ್ಲಿ ತೊಡಗಿರುವ ಎಲ್ಲ ಅಧಿಕೃತ ವ್ಯಕ್ತಿಗಳಿಗೆ

ಮಾನ್ಯರೇ

**ವಿದೇಶಕ್ಕೆ ನೀಡುವ ಭೇಟಿಗಳಿಗೆ ವಿದೇಶೀ ವಿನಿಮಯದ ಬಿಡುಗಡೆ-ಕರೆನ್ಸಿಯ ಘಟಕಾಂಶ**

ಇರಾಕ್, ಲಿಬಿಯಾ, ಇರಾನ್, ರಷಿಯಾ ಒಕ್ಕೂಟ ಮತ್ತು ಸ್ವತಂತ್ರ ರಾಜ್ಯಗಳ ಕಾಮನ್ ವೆಲ್ತ್‌ನ ಇತರ ರಿಪಬ್ಲಿಕ್‌ಗಳಲ್ಲದ ದೇಶಗಳನ್ನು ಹೊರತುಪಡಿಸಿ ಇತರ ದೇಶಗಳಿಗೆ ಪ್ರಯಾಣ ಬೆಳೆಸುವ ಪ್ರಯಾಣಿಕರಿಗೆ 500 ಅಮೇರಿಕಾ ಡಾಲರ್‌ಗಳು ಅಥವಾ ಅದಕ್ಕೆ ಸಮಾನವಾದ ಮೊತ್ತದವರೆಗೆ ವಿದೇಶೀ ಚಲಾವಣೆಯ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ವಿದೇಶೀ ವಿನಿಮಯವನ್ನು ಮಾರಾಟ ಮಾಡಲು ಅಧಿಕೃತ ವ್ಯಾಪಾರಿಗಳಿಗೆ ಹಾಗೂ ಪೂರ್ಣ ಪ್ರಮಾಣದ ಹಣ ಪರಿವರ್ತನಕಾರರಿಗೆ ಅನುಮತಿ ನೀಡಲಾಗಿದೆ. ಈ ದೇಶಗಳಿಗೆ ಹೋಗುವ ಪ್ರಯಾಣಿಕರಿಗೆ ಈ ಪರಿಮಿತಿಯನ್ನು ರಿಸರ್ವ್ ಬ್ಯಾಂಕ್‌ನ ಪೂರ್ವ ಅನುಮೋದನೆಯಿಲ್ಲದೆ 2000 ಅಮೇರಿಕಾ ಡಾಲರ್‌ಗಳಿಗೆ (ಎರಡು ಸಾವಿರ ಅಮೇರಿಕಾ ಡಾಲರ್ ಮಾತ್ರ) ಹೆಚ್ಚಿಸಲು ನಿರ್ಧರಿಸಲಾಗಿದೆ. ಅದರಂತೆ ಅಧಿಕೃತ ವ್ಯಾಪಾರಿಗಳು ಮತ್ತು ಪೂರ್ಣ ಪ್ರಮಾಣದ ಹಣ ಪರಿವರ್ತನಕಾರರು, ಅವರಿಗೆ ಬಿಡುಗಡೆ ಮಾಡಿರುವ ಒಟ್ಟು ವಿದೇಶೀ ವಿನಿಮಯದಿಂದ 2000 ಅಮೇರಿಕಾ ಡಾಲರ್ ಅಥವಾ ಅದಕ್ಕೆ ಸಮಾನವಾದ ಮೊತ್ತದವರೆಗೆ ವಿದೇಶಿ ಚಲಾವಣೆಯ ನೋಟುಗಳು ಮತ್ತು ನಾಣ್ಯಗಳ ರೂಪದಲ್ಲಿ ವಿದೇಶೀ ವಿನಿಮಯವನ್ನು ಮಾರಾಟ ಮಾಡಬಹುದು.

2. ಅಧಿಕೃತ ವ್ಯಕ್ತಿಗಳು ನೋಟೀಸಿನ ಒಳಾಂಶಗಳನ್ನು ತಮ್ಮ ಸಂಬಂಧಪಟ್ಟ ಘಟಕಗಳ ಗಮನಕ್ಕೆ ತರತಕ್ಕದ್ದು.

3. ಈ ಸುತ್ತೋಲೆಯಲ್ಲಿ ಒಳಗೊಂಡಿರುವ ನಿರ್ದೇಶನಗಳನ್ನು ವಿದೇಶೀ ವಿನಿಮಯ ನಿರ್ವಹಣೆ ಅಧಿನಿಯಮ, 1999 (1999ರ 42) ದ 10(4) ನೇ ಪ್ರಕರಣದ ಮತ್ತು 11(1) ನೇ ಪ್ರಕರಣದ ಮೇರೆಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಗ್ರೇಸ್ ಕೋಶಿಯೆ,
ಮುಖ್ಯ ಪ್ರಧಾನ ವ್ಯವಸ್ಥಾಪಕ.